ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 172/2025

ಸಿ ಡಬ್ಲ್ಯೂ- 7

ಪಿ ಡಬ್ಲ್ಯೂ- 6

ದಿಃ 06-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ನಿತ್ಯಾನಂದ ನಾಯ್ಕ |
| ತಂದೆಯ ಹೆಸರುಃ | ರತ್ನಾಕರ ನಾಯ್ಕ |
| ವಯಸ್ಸುಃ | 43 ವರ್ಷ |
| ಉದ್ಯೋಗಃ | ಚಾಲಕ |
| ವಿಳಾಸಃ | ಮಾವಿನಕೇರಿ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನಾನು ದ್ವಿತೀಯ ಪಿಯುಸಿವರೆಗೆ ಓದಿರುತ್ತೇನೆ. ನನ್ನ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿಯ ಪರಿಚಯ ಇರುವುದಿಲ್ಲ. ಮೃತ ಗೇಣು ಶೇಷು ನಾಯಕ ಇವರ ಪರಿಚಯವಿರುವುದಿಲ್ಲ. ಚಾಸಾ-1 ರಿಂದ 6,8 ರಿಂದ 10 ರವರ ಪರಿಚಯವಿರುವುದಿಲ್ಲ. ಮಾವಿನಕೇರಿ, ಹಟ್ಟಿಕೇರಿ, ಸಕಲಬೇಣ, ಜನತಾ ಕಾಲೋನಿ, ತಾರಿಬೋಳಾ ಇವೆಲ್ಲವೂ ನನ್ನ ಊರಿನ ಅಕ್ಕಪಕ್ಕದ ಊರುಗಳು. ಇವೆಲ್ಲವೂ ಅವರ್ಸಾ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ. ನಾನು ಯಾವುದೇ ವಾಹನ ಅಪಘಾತವಾಗಿರುವುದನ್ನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ. ಅಪಘಾತವು ಯಾವ ರೀತಿ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ಮೃತ ಗೇಣು ಶೇಷು ನಾಯ್ಕ ಇವರರು

ತೀರಿಕೊಂಡಿರುತ್ತಾರೆ ಎಂದು ಮಾತ್ರ ಗೊತ್ತಿರುತ್ತದೆ. ಸದರಿ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿ ಆರೋಪಿ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ಗೇಣು ಶೇಷು ನಾಯಕ ಇವರು ಮೃತ ಪಟ್ಟಿರುತ್ತಾರೆ ಎಂದು ನನ್ನನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ. ಹಾಗೂ ಹೇಳಿಕೆಯನ್ನಾಗಲಿ ಅಥವಾ ಮರುಹೇಳಿಕೆಯನ್ನಾಗಲಿ ಕೊಟ್ಟಿರುವುದಿಲ್ಲ. ಸಾಕ್ಷಿಯು ನಿಪಿ-4,5 ಮತ್ತು 9ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-4ಸಿ,5ಸಿ ಮತ್ತು 9ಸಿ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಯಾವ ವಿಚಾರಕ್ಕೆ ಎಲ್ಲಿ ಮಾಡಿರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ ಹಾಗೂ ನಿಪಿ-4,5 ಮತುತ 9 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಸಾಕ್ಷಿಗೆ ನಿಪಿ-6,7,10 ಮತ್ತು 11 ಪೊಟೋಗಳನ್ನು ತೋರಿಸಲಾಗಿ, ಸದರಿ ಪೊಟೋಗಳಲ್ಲಿ ಅವರು ಕಂಡು ಬಂದಿದ್ದು, ಅದನ್ನು ಸಾಕ್ಷಿಯು ಗುರುತಿಸುತ್ತಾರೆ. ಮುಂದುವರೆದು, ಸಾಕ್ಷಿಯು ಸದರಿ ಮೊಟೋಗಳನ್ನು ಎಲ್ಲಿ ಹಾಗೂ ಯಾವ ವಿಚಾರಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ನನ್ನನ್ನು ಕರೆದಾಗ ಹೋಗಿದ್ದಾಗ ಪೊಟೋ ತೆಗೆದಿರುತ್ತಾರೆ. ಆದರೆ ಎಲ್ಲಿ ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ. ನನ್ನ ಮುಂದೆ ಯಾವುದೇ ವಾಹನವನ್ನು ಜಪ್ತಿಪಡಿಸಿಕೊಂಡಿದ್ದಾಗಲಿ ಇರುವುದಿಲ್ಲ. ಪಂಚನಾಮೆ ಬರೆಯಲು ನಾನು ಯಾವುದೆ ಸ್ಥಳವನ್ನು ತೋರಿಸಿದ್ದಾಗಲಿ, ಮಾಹಿತಿ ನೀಡಿದ್ದಾಗಲಿ ಇರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ಆರೋಪಿಯು ನಿಮ್ಮ ಪಕ್ಕದ ಊರಿನವರು ಆಗಿದ್ದು, ಅವರ ಪರಿಚಯ ಇರುತ್ತದೆ ಎಂದರೆ ಸರಿಯಲ್ಲ. ಚಾಸಾ-1 ರಿಂದ 6,8 ರಿಂದ 10 ರವರು ನಿಮ್ಮ ಊರಿನ ಅಕ್ಕಪಕ್ಕದ ಊರಿನವರು ಆಗಿದ್ದು ಅವರ ಪರಿಚಯವಿದ್ದರೂ ಸಹ ಪರಿಚಯವಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿ ಮೃತ ಗೇಣು ಶೇಷು ನಾಯ್ಕ ಇವರೂ ಸಹ ನಿಮ್ಮ ಪಕ್ಕದ ಊರಿನವರು ಆಗಿದ್ದು, ಅವರ ಪರಿಚಯವಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ದಿಃ 26-06-2024 ರಂದು ಮಧ್ಯಾಹ್ನ 3 ಗಂಟೆಯ ಸುಮಾರಿಗೆ ನೀವು ನಿಮ್ಮ ಪ್ಯಾಸೆಂಜರ್ ಟೆಂಪೊವನ್ನು ರಾಷ್ಟ್ರೀಯ ಹೆದ್ದಾರಿ-66 ರಸ್ತೆಯ ಹಟ್ಟಿಕೇರಿ ಬಾಬು ಗ್ಯಾರೇಜ್ ಅಂಗಡಿ ಹತ್ತಿರ ನಿಲ್ಲಿಸಿ ನಿಂತಿರುವಾಗ ಒಬ್ಬ ಮೋಟರ್ ಸೈಕಲ್ ಸವಾರನು ತನ್ನ ಮೋಟರ್ ಸೈಕಲನ್ನು ಕಾರವಾರ ಕಡೆಯಿಂದ ಅಂಕೋಲಾ ಕಡೆಗೆ ಅತಿ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದವನು ತನ್ನ ಚಾಲನೆ ಮೇಲಿನ ನಿಯಂತ್ರಣವನ್ನು ಕಳೆದುಕೊಂಡು ರಸ್ತೆಯ ಬದಿಯಲ್ಲಿ ಅವರ್ಸಾ ಕಡೆಯಿಂದ ಹಟ್ಟಿಕೇರಿ ಕಟ್ಟಿಗೆ ಡಿಪೋ ಕಡೆಗೆ ನಡೆದುಕೊಂಡು ಹೋಗುತ್ತಿದ್ದ, ಮೃತ ಗೇಣು ಶೇಷು ನಾಯಕ ಇವರಿಗೆ ಹಿಂದಿನಿಂದ ಡಿಕ್ಕಿ ಹೊಡೆದು, ಅಪಘಾತಪಡಿಸಿ ರಸ್ತೆಯ ಮೇಲೆ ಬೀಳಿಸಿ, ಕೂಡಲೇ ನೀವು ಓಡಿ ಹೋಗಿ ನೋಡಲು ಪಾದಾಚಾರಿ ನಿಮ್ಮ ಪರಿಚಯದ ಗೇಣು ಶೇಷು ನಾಯಕ ಇವರ ಆಗಿದ್ದು, ಅವರನ್ನು ಎಬ್ಬಿಸಿ ಉಪಚರಿಸಿ ನೋಡಲು ತಲೆಯ ಭಾಗದಲ್ಲಿ ಭಾರಿ ಗಾಯನೋವು ಆಗಿದ್ದು, ಮಾತನಾಡುತ್ತಿರಲಿಲ್ಲ. ಮೋಟರ್ ಸೈಕಲ್

ಸವಾರನು ನಿಮ್ಮ ಊರಿನವರೇ ಹಾಗೂ ಪರಿಚಯಸ್ಥರು ಚಾಸಾ-8 ರವರು ಆಗಿದ್ದು, ಹಣೆ, ಬಲಗೈ ಹಾಗೂ ಎಡಕಾಲಿಗೆ ಸಣ್ಣಪುಟ್ಟ ಗಾಯನೋವು ಪಡಿಸಿ, ತನಗೂ ಸಹ ಮುಖ, ಬಲಗಣ್ಣು, ಬಲಕಾಲಿಗೆ ಹಾಗೂ ಬಲಗೈಗೆ ಗಾಯನೋವು ಪಡಿಸಿಕೊಂಡಿದ್ದು, ಅಪಘಾತಪಡಿಸಿದ ಮೋಟರ್ ಸೈಕಲ್ ಸವಾರನಿಗೆ ಉಪಚರಿಸಿ, ಹೆಸರು ವಿಳಾಸ ಕೇಳಲಾಗಿ, ಆತನು ತನ್ನ ಹೆಸರು ವಿಳಾಸವನ್ನು ತಿಳಿಸಿರುತ್ತಾನೆ. ಆತನೇ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಅಪಘಾತಪಡಿಸಿದ ಮೋಟರ್ ಸೈಕಲ್ ನಂಬರ ನೋಡಲು ಕೆ ಎ 30 ಜೆ 2356 ಆಗಿತ್ತು ಎಂದರೆ ಸರಿಯಲ್ಲ. ಅಷ್ಟರಲ್ಲಿ ವಿಷಯ ತಿಳಿದು ಸ್ಥಳಕ್ಕೆ ಬಂದ ಐ ಆರ್ ಬಿ ಅಂಬುಲೆನ್ಸ ಮುಖಾಂತರ ಮೂವರು ಗಾಯಾಳುಗಳಿಗೆ ಉಪಚಾರಕ್ಕೆ ಅಂಕೋಲಾ ಸರಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಂತರ ನೀವು ಗೇಣು ಶೇಷು ನಾಯಕ ಇವರ ಮಗನಾದ ಚಾಸಾ-9 ರವರಿಗೆ ವಿಷಯವನ್ನು ತಿಳಿಸಿದ್ದು, ಅವರೂ ಸಹ ಸ್ಥಳಕ್ಕೆ ಬಂದು ನೋಡಿ ಸರಕಾರಿ ಅಂಕೋಲಾ ಆಸ್ಪತ್ರೆಗೆ ಗಾಯಾಳು ಜೊತೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸರಕಾರಿ ಆಸ್ಪತ್ರೆಯ ವೈದ್ಯರು ಗೇಣು ಶೇಷು ನಾಯಕ ಇವರಿಗೆ ಹೆಚ್ಚಿನ ಚಿಕಿತ್ಸೆಗಾಗಿ ಕಾರವಾರ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಚಿಕಿತ್ಸೆ ಪಡೆದು, ಇನ್ನೂ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ಲಾಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದ ಬಗ್ಗೆ ನಿಮಗೆ ವಿಷಯ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರೋಪಿಯು ತನ್ನ ವಾಹನವನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದ ಕಾರಣ ಅಪಘಾತ

ಸಂಭವಿಸಿದೆ ಎಂದು ಪ್ರತ್ಯಕ್ಷವಾಗಿ ನೋಡಿ, ಸದರಿ ಅಪಘಾತದ ವಿಚಾರವಾಗಿ ಪೊಲೀಸರು ನಿಮ್ಮನ್ನು ವಿಚಾರಿಸಿದಾಗ ಸದರಿ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ದಿಃ30-06-2024 ರಂದು ನಿಮ್ಮ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ-17 ಎಂದು ಗುರುತಿಸಲಾಯಿತು. ದಿಃ30-06-2024 ರಂದು ಸದರಿ ಅಪಘಾತವನ್ನು ನೀವು ಪ್ರತ್ಯಕ್ಷವಾಗಿ ನೋಡಿದ ಮೇರೆಗೆ ಅಪಘಾತ ಸ್ಥಳದ ಪಂಚನಾಮೆ ಬರೆಯಲು ಹಾಗೂ ತಾವು ತೋರಿಸಿದ ಅಪಘಾತ ಸ್ಥಳದ ಮಾಹಿತಿ ಮೇರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 11 ರಿಂದ 12.30 ಗಂಟೆಯವರೆಗೆ ಪಂಚನಾಮೆ ಜರುಗಿಸಿ, ನಿಪಿ-5 ರಂತೆ ಕಚ್ಚಾ ನಕಾಶೆ ತಯಾರಿಸಿ, ಹಾಗೂ ನಿಪಿ-6 ಮತ್ತು 7 ರಂತೆ ಪಂಚನಾಮೆ ಜರುಗಿಸಿದ್ದ ಬಗ್ಗೆ ನಿಮ್ಮ ಸಹಿಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ-2 ಮತ್ತು 3 ರವರು ಸಮಕ್ಷಮ ಮಧ್ಯಾಹ್ನ 1.15 ರಿಂದ 2.15 ಗಂಟೆಯವರೆಗೆ ಸದರಿ ಅಪಘಾತಪಡಿಸಿದ ವಾಹನವನ್ನು ಜಪ್ತಿಪಡಿಸಿದ ಸಂದರ್ಭದಲ್ಲಿ ಪಂಚನಾಮೆ ಜರುಗಿಸಿ, ನಿಪಿ-10 ಮತುತ 11 ರಂತೆ ಪೊಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತಪಡಿಸಿದ ವಾಹನವನ್ನು ನಿಮ್ಮ ಸಮಕ್ಷಮ ನೀವು ತೋರಿಸಿದ ಮೇರೆಗೆ ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4,5,9 ರಲ್ಲಿ ಬರೆದ ವಿಷಯಗಳ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಮಾಹಿತಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-5 ರಂತೆ ಪಂಚನಾಮೆ ಜರುಗಿಸುವ ಸಂದರ್ಭದಲ್ಲಿ ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-6,7,8,10 ಮತ್ತು 11 ಪೊಟೋಗಳನ್ನು

ಪಂಚನಾಮೆ ಜರುಗಿಸುವ ಸಂದರ್ಭದಲ್ಲಿ ಘಟನಾ ಸ್ಥಳದ ಹಾಗೂ ಅಪಘಾತಪಡಿಸಿದ ವಾಹನ ಜಪ್ತಿಪಂಚನಾಮೆ ಸಂದರ್ಭದಲ್ಲಿ ತೆಗೆದ ಪೊಟೋಗಳು ಎಂದರೆ ನನಗೆ ಗೊತ್ತಿರುವುದಿಲ್ಲ. ದಿಃ23-07-2024 ರಂದು ಅಪಘಾತದಲ್ಲಿ ಗಾಯಗೊಂಡ ಗೇಣು ಶೇಷು ನಾಯಕ ಇವರು ಮಂಗಳೂರಿನ ವೆನ್ಲಾಗ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿ, ಅಲ್ಲಿಂದ ಮರಳಿ ಕಾರವಾರ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದವರು ರಾತ್ರಿ 12.10 ಗಂಟೆಗೆ ಮೃತ ಪಟ್ಟ ಬಗ್ಗೆ ತಿಳಿದು ಬಂದಿದ್ದು, ಸದರಿ ವಿಚಾರವಾಗಿ ನಿಮ್ಮ ಮರುಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಮರುಹೇಳಿಕೆಯ ಭಾಗವನ್ನು ನಿಪಿ-18 ಎಂದು ಗುರುತಿಸಲಾಯಿತು. ನಿಪಿ-17 ಮತ್ತು 18 ರಲ್ಲಿ ಬರೆದ ಎಲ್ಲ ವಿಚಾರಗಳ ಬಗ್ಗೆ ನಿಮ್ಮ ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಇದ್ದರೂ, ಸದರಿ ಅಪಘಾತ ಸಂಭವಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೃತ ಗೇಣು ಶೇಷು ನಾಯ್ಕ ಇವರ ಮರಣಕ್ಕೆ ಸದರಿ ಅಪಘಾತವೇ ಕಾರಣ ನೀವು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿದ ಬಗ್ಗೆ ಹಾಗೂ ಆರೋಪಿಯ ತಪ್ಪಿನಿಂದಲೇ ಅಪಘಾತ ಸಂಭವಿಸಿದೆ ಎಂದು ನಿಪಿ-17 ಮತ್ತು 18 ರಂತೆ ನಿಮ್ಮ ಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ. ಆರೊಪಿಯು ನಿಮ್ಮ ಪರಿಚಯಸ್ಥ ಹಾಗೂ ಊರಿನವರು ಆದ ಕಾರಣ ಆರೋಪಿಗೆ ಸಹಾಯವಾಗಲೆಂದು ಅಪಘಾತ ಸಂಭವಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ಹಾಗೂ ಚಾಸಾ-1 ಹಾಗೂ ಮೃತನ ಕುಟುಂಬಸ್ಥರು ಸೇರಿ ಸದರಿ ಪ್ರಕರಣವನ್ನು ರಾಜಿ ಮಾಡಿಕೊಂಡ ಕಾರಣ ಅಪಘಾತದ ಬಗ್ಗೆ ಹಾಗೂ ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದು ತಿಳಿದಿದ್ದರೂ, ಆರೋಪಿಗೆ ಸಹಾಯವಾಗಲೆಂದು

ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಇದೇ ಮೊದಲಬಾರಿಗೆ ಹಾಗೂ ಸದರಿ ಅಪಘಾತದ ಬಗ್ಗೆ ಯಾರನ್ನೂ ವಿಚಾರಣೆ ಮಾಡದೆ ನೇರವಾಗಿ ಮಾನ್ಯ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.